ಫಾರಂ ನಂ.4 (ಸಿವಿಲ್)

ಡಿಪೋಜಿಶನ್ ಶೀಟ್ (ಆರ್.ಪಿ.ನಂ.57)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ

ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ

ಅಸಲುದಾವಾ ಸಂಖ್ಯೆ : 257/2013

ಡಿಡಬ್ಲ್ಯೂ : 2

ದಿನಾಂಕಃ 20.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಮ್ ಬಿ ಕೆ ಅವರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ, ಅದರಲ್ಲಿ ನನ್ನ ಸಹಿ ಇರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆಃ ಇಲ್ಲ

ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರೀ ಎಮ್ ಎಮ್ ಎಮ್ ಅವರಿಂದಃ

1. ನನ್ನ ಕಣ್ಣು ಸರಿಯಾಗಿ ಕಾಣಿಸುತ್ತದೆ ಎಂದರೆ ಸರಿಯಲ್ಲ. ನನ್ನ ಕಿವಿ ಮಬ್ಬು ಇವೆ, ಸರಿಯಾಗಿ ಕೇಳಿಸುವುದಿಲ್ಲ. ಈ ಸಮಸ್ಯೆ ಶುರುವಾಗಿ ಬಹಳ ವರ್ಷ ಆಗಿದೆ, ಎಷ್ಟು ವರ್ಷ ಎಂದು ನೆನಪು ಇಲ್ಲ. ಆದುದರಿಂದ ನಾನು ಏನೇ ಕೆಲಸ ಮಾಡಿದರೂ ಒಬ್ಬರ ಸಹಾಯ ಬೇಕೆ ಬೇಕು ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿ ಬಂದ ವ್ಯಕ್ತಿ ನನ್ನ ಮೊಮ್ಮಗ ಮಾರುತಿ ಎಂದರೆ ಸರಿ. ಆತ ಮತ್ತು ಆತನ ಹೆಂಡತಿ ಈ ದಿನ ಬಂದಿದ್ದಾರೆ ಎಂದರೆ ಸರಿ.

2. ನನ್ನ ಎಷ್ಟನೇ ವಯಸ್ಸಿನಲ್ಲಿ ಮದುವೆ ಆಗಿದೆ ಎಂದು ನೆನಪು ಇಲ್ಲ. ನನ್ನನ್ನು ಯಲಬುರ್ತಿಗೆ ಮದುವೆ ಮಾಡಿಕೊಟ್ಟಿತ್ತು. ನನ್ನ ಗಂಡನಿಗೆ ಇಬ್ಬರೂ ಅಣ್ಣ-ತಮ್ಮಂದಿರು ಇದ್ದರು. ಅವರ ಹೆಸರು ದ್ಯಾಮಣಗೌಡ, ಹೊನ್ನನಗೌಡ ಮತ್ತು ನನ್ನ ಗಂಡನ ಹೆಸರು ಗೋವಿಂದಗೌಡ. ನನ್ನ ಮದುವೆಯನ್ನು ನನ್ನ ಅಣ್ಣ-ತಮ್ಮಂದಿರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತವರುಮನೆ ಶಾಖಾಪೂರ. ನನಗೆ ಇಬ್ಬರೂ ಹೆಣ್ಣು ಮಕ್ಕಳು, ಅವರ

ಹೆಸರು ಹೊನ್ನವ್ವ ಮತ್ತು ಪಾರವ್ವ. ನನಗೆ ಗಂಡು ಮಕ್ಕಳು ಇಲ್ಲ. ನನ್ನ ಮಕ್ಕಳು ಚಿಕ್ಕವರು ಇದ್ದಾಗ ನನ್ನ ಗಂಡ ತೀರಿಕೊಂಡಿರುತ್ತಾನೆ ಎಂದರೆ ಸರಿ. ಈ ಕಾರಣದಿಂದ ನನ್ನ ಚಿಕ್ಕ ಮಕ್ಕಳನ್ನು ಕರೆದುಕೊಂಡು ನನ್ನ ಗಂಡನ ಅಣ್ಣ  ತಮ್ಮಂದಿರ ಮನೆಯಲ್ಲಿ ಬಾಳ್ವೆ ಮಾಡಲು ಕಷ್ಟ ಆಯಿತು ಎಂದರೆ ಸರಿ. ಆದುದರಿಂದ ನನ್ನ ಅಣ್ಣಂದಿರಾದ ಹನಮಪ್ಪ ಮತ್ತು ಕರಿಯಪ್ಪನ ಮನೆಗೆ ಬಂದು ಮಕ್ಕಳ ಜೊತೆ ವಾಸ ಮಾಡಲು ಆರಂಭಿಸಿದೆ ಎಂದರೆ ಸರಿ. ಅದೇ ಕಾರಣದಿಂದ ನನ್ನ ತವರುಮನೆಯವರು ನನಗೆ ಮತ್ತು ನನ್ನ ಮಕ್ಕಳಿಗೆ ಇರಲು ಮನೆ ಕೊಟ್ಟಿರುತ್ತಾರೆ ಎಂದರೆ ಸರಿ. ಆ ರೀತಿ ನಾನು ತವರುಮನೆಗೆ ಬಂದವರು ಇವತ್ತಿನವರೆಗೂ ಸಹ ತವರುಮನೆಯಲ್ಲಿ ವಾಸ ಇದ್ದೇನೆ ಎಂದರೆ ಸರಿ. ನಾನು ತವರುಮನೆಗೆ ಬಂದಾಗ ನನ್ನ ಮಕ್ಕಳ ವಯಸ್ಸು 6 ರಿಂದ 7 ವರ್ಷ ಇತ್ತು. ಆ ರೀತಿ ನಾನು ತವರುಮನೆಗೆ ಮಕ್ಕಳ ಸಮೇತ ಬಂದಾಗ ನನ್ನ ಆಗುಹೋಗನ್ನು ನನ್ನ ತವರುಮನೆಯವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರೇ ನನ್ನ ಇಬ್ಬರೂ ಹೆಣ್ಣುಮಕ್ಕಳ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

3. ನನ್ನ ಹಿರಿಮಗಳು ಹೊನ್ನವ್ವಳಿಗೆ ಇಬ್ಬರೂ ಹೆಣ್ಣುಮಕ್ಕಳು, ನಾಲ್ಕು ಜನ ಗಂಡುಮಕ್ಕಳು. ಅವರ ಪೈಕಿ ಗಂಡುಮಗ ಒಬ್ಬನೇ ಜೀವಂತ ಇದ್ದಾನೆ. ಉಳಿದವರು ಮೃತಪಟ್ಟಿರುತ್ತಾರೆ. ಈ ದಿನ ನ್ಯಾಯಲಯಕ್ಕೆ ಬಂದ ಮಾರುತಿ ಒಬ್ಬನೇ ಜೀವಂತ ಇದ್ದಾನೆ ಎಂದರೆ ಸರಿ. ನನ್ನ ಜೊತೆ ನನ್ನ ತವರುಮನೆಯವರು ಯಾರು ಬಂದಿಲ್ಲ, ಸದರಿ ಮಾರುತಿ ಮತ್ತು ಆತನ ಹೆಂಡತಿ ಹನಮವ್ವ ಮಾತ್ರ ನನ್ನ ಜೊತೆ ಬಂದಿರುತ್ತಾರೆ ಎಂದರೆ ಸರಿ.

4. ನನ್ನ ತವರುಮನೆಗೆ ಬಂದ ನಂತರ ನಾನು ನನ್ನ ಗಂಡನ ಆಸ್ತಿ ಪಡೆಯಲು ಹೋರಾಟ ಮಾಡಿರುತ್ತೇನೆ. ನನ್ನ ಗಂಡನ ಆಸ್ತಿ ಪಡೆಯಲು ಕೇಸ ಹಾಕಲು ನಾನು ಯಾವ ವಕೀಲರಿಗೆ ನೇಮಿಸಿದ್ದೆ ಎಂದು ನೆನಪು ಇಲ್ಲ. ಆ ರೀತಿ ನಾನು ಬಿ. ಕಿಶನರಾವ್ ವಕೀಲರ ಮೂಲಕ ನನ್ನ ಗಂಡನ ಆಸ್ತಿ ಪಡೆಯಲು ಮಕ್ಕಳ ಪರವಾಗಿ ಕೇಸ ಹಾಕಿದ್ದೆ ಎಂದರೆ ಸರಿ. ಸದರಿ ಕೇಸ ಮೂಲ ದಾವಾ ನಂ. 54/1984 ಎಂದರೆ ಸರಿ. ಅದರಲ್ಲಿ ನನ್ನ ಗಂಡನ ಭಾಗ ಕೊಡಬೇಕು ಎಂದು ನನ್ನ ಪರವಾಗಿ ಕೋರ್ಟ ಆದೇಶ ಮಾಡಿತ್ತು ಎಂದರೆ ಸರಿ. ಈ ಆದೇಶದ ವಿರುದ್ಧ ನನ್ನ ಗಂಡನ ಅಣ್ಣ ಕೊಪ್ಪಳದ ಕೋರ್ಟಗೆ ಅಪೀಲು ಹಾಕಿದ್ದ ಎಂದರೆ ಸರಿ. ಸದರಿ ಅಪೀಲು ಆರ್ ಎ ಸಂಖ್ಯೆ 5/1992 ಎಂದರೆ ಸರಿ. ನಾನು ನನ್ನ ಮಕ್ಕಳ

ಪರವಾಗಿ ಸದರಿ ಅಪೀಲಿನಲ್ಲಿ ಬಿ. ಕಿಶನರಾವ್ ವಕೀಲರ ಮೂಲಕ ಕೌಂಟರ್ ಅಪೀಲ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅಪೀಲನಲ್ಲಿ ನನ್ನ ಕೌಂಟರ್ ಅಪೀಲು ನನ್ನಂತೆ ಆದೇಶ ಆಗಿ, ನನ್ನ ಗಂಡನ ಅಣ್ಣ ಸಲ್ಲಿಸಿದ ಅಪೀಲು ವಜಾ ಆಯಿತು ಎಂದರೆ ಸರಿ.

5. ನನ್ನ ತಂದೆಯ ಹೆಸರು ದ್ಯಾಮಣ್ಣ ತಂದೆ ಗೋವಿಂದಪ್ಪ ಮೇಟಿ ಹಾಗೂ ತಾಯಿಯ ಹೆಸರು ಭೀಮವ್ವ ಸಾಃ ಶಾಖಾಪೂರ ಎಂದರೆ ಸರಿ. ನನ್ನ ತಂದೆ ತಾಯಿ ಮೊದಲನೇ ಮಗ ಹನಮಪ್ಪ, ಎರಡನೇ ಮಗ ಕರಿಯಪ್ಪ, 3 ನೇ ಮಗಳು ಹನಮವ್ವ, 4 ನೇ ಮಗಳು ಶಾವಂತ್ರವ್ವ, 5 ನೇ ಮಗಳು ನಾನು, 6 ನೇ ಮಗಳು ಗೌರವ್ವ ಎಂದರೆ ಸರಿ. ನನ್ನ ಅಣ್ಣ ಹನಮಪ್ಪ ತೀರಿಕೊಂಡಿದ್ದು, ಆತನಿಗೆ ಹೆಂಡತಿ ಮಕ್ಕಳು ಇಲ್ಲ ಎಂದರೆ ಸರಿ. ನನ್ನ 2 ನೇ ಅಣ್ಣ ಕರಿಯಪ್ಪನಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ಸದರಿ ಕರಿಯಪ್ಪನ ಹೆಂಡತಿ ಹೆಸರು ಶರಣವ್ವ ಆಕೆ ಹಿರೇನಂದಿಹಾಳದಲ್ಲಿ ಇರುತ್ತಾಳೆ ಎಂದರೆ ಸರಿ. ಶರಣಮ್ಮನ ಹೆಣ್ಣುಮಕ್ಕಳು ಎಲ್ಲಾ ಮದುವೆ ಆಗಿ ಹೋಗಿದ್ದು, ಅವರು ಗಂಡನ ಮನೆಯಲ್ಲಿ ವಾಸ ಇದ್ದು, ಶರಣಮ್ಮ ಇಬ್ಬರೂ ಹೆಣ್ಣು ಮಕ್ಕಳ ಸಮೇತ ಹಿರೇನಂದಿಹಾಳದಲ್ಲಿ ವಾಸ ಇದ್ದಾಳೆ ಎಂದರೆ ಸರಿ. ನನ್ನ ಅಕ್ಕ ಹನಮವ್ವಳನ್ನು ಹಿರೇನಂದಿಹಾಳಕ್ಕೆ ಕೊಟ್ಟಿತ್ತು, ಆಕೆ ತೀರಿಕೊಂಡಿರುತ್ತಾಳೆ ಎಂದರೆ ಸರಿ. ನನ್ನ ಅಕ್ಕ ಶಾವಂತ್ರವ್ವನ ಗಂಡನ ಹೆಸರು ಬಸನಗೌಡ ಮಾಲಿಪಾಟೀಲ ಅವರು ಹಿರೇನಂದಿಹಾಳದಲ್ಲಿ ಇರುತ್ತಾರೆ ಎಂದರೆ ಸರಿ. ಗೌರವ್ವಳನ್ನು ಲಿಂಗನಬಂಡಿಗೆ ಕೊಟ್ಟಿತ್ತು, ಆಕೆ ತೀರಿಕೊಂಡಿರುತ್ತಾಳೆ ಎಂದರೆ ಸರಿ. ನನ್ನ ತಂದೆ ದ್ಯಾಮಣ್ಣನ ಸಂತಾನವಾಗಿ ನಾನು ಮಾತ್ರ ಶಾಖಾಪೂರದಲ್ಲಿ ವಾಸ ಇದ್ದೇನೆ ಎಂದರೆ ಸರಿ. ನನ್ನ ಕುಟುಂಬದಲ್ಲಿ ಆಗುವ ಹೋಗುವ ವಿಚಾರ ನನ್ನ ಅಕ್ಕ ಶಾವಂತ್ರವ್ವ, ಅಣ್ಣನ ಹೆಂಡತಿ ಶರಣವ್ವನಿಗೆ ಗೊತ್ತಿದೆ ಎಂದರೆ ಸರಿಯಲ್ಲ.

6. ನನ್ನ ಹಿರಿಮಗಳು ಹೊನ್ನವ್ವನ ಮದುವೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ಕಿರಿ ಮಗಳು ಪಾರವ್ವಳ ಮದುವೆ ಎಷ್ಟು ವರ್ಷದಿಂದ ಆಗಿದೆ ಎಂದು ಹೇಳಲು ಆಗುವುದಿಲ್ಲ. ವಾದಿಯನ್ನು ತಳುವಗೇರಾಕ್ಕೆ ಮದುವೆ ಮಾಡಿ ಕೊಟ್ಟಿರುತ್ತೇನೆ. ಹೊನ್ನವ್ವನನ್ನು ಇದ್ದ ಊರಲ್ಲಿಯೇ ಮದುವೆ ಮಾಡಿಕೊಟ್ಟಿರುತ್ತೇನೆ. ನನ್ನ ತವರುಮನೆಯ ಅಡ್ಡ ಹೆಸರು ಮೇಟಿ ಹಾಗೂ ನನ್ನ ಮಗಳು 1 ನೇ ಪ್ರತಿವಾದಿಯ ಗಂಡನ ಮನೆಯವರ ಅಡ್ಡಹೆಸರು ಮೇಟಿ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ಹೆಸರು ಹನಮಪ್ಪ, ಆತನ

ತಂದೆಯ ಹೆಸರು ನಿಂಗಪ್ಪ ಅಲಿಯಾಸ್ ಲಿಂಗಪ್ಪ ಎಂದರೆ ಸರಿ. ನನ್ನ ಅಳಿಯ ಹನಮಪ್ಪ ತಂದೆ ನಿಂಗಪ್ಪ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ, ಮದುವೆಯನ್ನು ನನ್ನ ಅಣ್ಣ ಹನಮಪ್ಪ ಮದುವೆ ಮಾಡಿ ಕೊಟ್ಟಿರುತ್ತಾನೆ. ನನ್ನ ಅಣ್ಣ ಹನಮಪ್ಪ ಇಬ್ಬರೂ ಮಕ್ಕಳ ಮದುವೆ ಮಾಡಿಕೊಟ್ಟಿರುತ್ತಾನೆ. ನನ್ನ ಅಣ್ಣ ನನ್ನ ಮಕ್ಕಳ ಮದುವೆ ಮಾಡಿಕೊಟ್ಟ ಕಾರಣ ಅವರ ಮದುವೆ ವಿಚಾರ ಗೊತ್ತಿಲ್ಲ ಎಂದರೆ ಸರಿ.

7. ಈಗ ತೋರಿಸಿದ ವಾದ ಪತ್ರದಲ್ಲಿ ಯಲ್ಲವ್ವ ಗಂಡ ಗೋವಿಂದಪ್ಪ ಗೌಡರ ಎಂಬ ಸ್ಥಳದಲ್ಲಿ ಹೆಬ್ಬಟ್ಟು ಸಹಿ ಇದೆ ಎಂದರೆ ಸರಿ. ಸದರಿ ಸಹಿಯನ್ನು ಯಾಕೆ ಮಾಡಿರುತ್ತಿ ಎಂದರೆ ಸಾಕ್ಷಿಯು ಮಕ್ಕಳ ಕಿರಿಕಿರಿ ಸಲುವಾಗಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅವರು ಯಾವುದರ ಸಲುವಾಗಿ ಕಿರಿಕಿರಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ, ಆದರೆ ನಾನು ಮಾಡುವುದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈಗ ತೋರಿಸಿದ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಹೆಬ್ಬಟ್ಟು ಸಹಿ ಇದೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಹಾಗೂ ಅದಕ್ಕೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಈಗ ತೋರಿಸಿದ ಪ್ರತಿವಾದ ಪತ್ರದಲ್ಲಿ ನನ್ನ ಹೆಬ್ಬಟು ಸಹಿ ಇದೆ ಎಂದರೆ ಸರಿ. ಸದರಿ ಸಹಿಯನ್ನು ಯಾವಾಗ, ಎಲ್ಲಿ, ಯಾವ ಕಾರಣಕ್ಕೆ ಮಾಡಿರುತ್ತೇನೆ ಎಂದರೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮಧ್ಯಾಹ್ನದ ಅವಧಿ ಆದ ಕಾರಣ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಯಿತು.**

**ಅಸಲುದಾವಾ ಸಂಖ್ಯೆ : 257/2013**

**ಡಿಡಬ್ಲ್ಯೂ : 2**

**ದಿನಾಂಕಃ 20.07.2026 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರೀ ಎಮ್ ಎಮ್ ಎಮ್ ಅವರಿಂದಃ**

8. ನನ್ನ ಮಗಳು ಹೊನ್ನವ್ವನ ಕುಟುಂಬಕ್ಕೆ ದಾವಾ ಆಸ್ತಿ ಒಂದೇ ಇದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಯಾರು, ಯಾವಾಗ, ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆ

ಎಂದು ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಅವರು ದುಡಿದಿರುತ್ತಾರೆ, ಅವರು ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮಗಳು ಹೊನ್ನವ್ವಳ ಕುಟುಂಬದ ಆದಾಯ ಮತ್ತು ಖರ್ಚು ಎಷ್ಟಾಗುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗಳು ಹೊನ್ನವ್ವಳ ಕುಟುಂಬಕ್ಕೆ ಎಷ್ಟು ಜಮೀನು ಇವೆ ಎಂದು ನನಗೆ ಗೊತ್ತಿಲ್ಲ. ನನ್ನ ಖರ್ಚು ವೆಚ್ಚ ಮತ್ತು ಆಗುಹೋಗುಗಳನ್ನು ನನ್ನ ಮಗಳು ಹೊನ್ನವ್ವ ನೋಡಿಕೊಂಡು ಹೋಗುತ್ತಿದ್ದಾಳೆ ಎಂದರೆ ಸರಿಯಲ್ಲ.

9. ನನ್ನ ಗಂಡನ ಆಸ್ತಿ ಬಂದಿದ್ದನ್ನು ನನ್ನ ಮಕ್ಕಳಿಗೆ ಸಮನಾಗಿ ಹಂಚಿಕೊಟ್ಟಿರುವುದಿಲ್ಲ ಆದರೆ 1 ಲಕ್ಷ ಹಣ ಕೊಟ್ಟಿರುತ್ತೇನೆ. ದಾವಾ ಆಸ್ತಿಯ ಖರೀದಿ ವ್ಯವಹಾರದಲ್ಲಿ ನಾನು ಭಾಗಿ ಆಗಿರುವುದಿಲ್ಲ. ಸದರಿ ಖರೀದಿ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಆದರೆ ರೊಕ್ಕ ಕೊಟ್ಟಿರುವುದಿಲ್ಲ. ಸದರಿ ಖರೀದಿ ವ್ಯವಹಾರದಲ್ಲಿ ಯಾರು ಯಾರು ಭಾಗಿ ಆಗಿದ್ದರು, ಎಷ್ಟು ಹಣಕ್ಕೆ ವ್ಯವಹಾರ ಆಯಿತು ನನಗೆ ಗೊತ್ತಿಲ್ಲ. ಖರೀದಿ ಪತ್ರ ಯಾರ ಹೆಸರಿನಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಮೂಲ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ.

10. ಹನಮಪ್ಪ ತಂದೆ ಲಿಂಗಪ್ಪ ಮೇಟಿ ನನ್ನ ಮಗಳು 1 ನೇ ಪ್ರತಿವಾದಿಯ ಗಂಡ ಎಂದರೆ ಸರಿ. ಸದರಿ ಹನಮಪ್ಪನ ಹೆಸರಿನಲ್ಲಿ ಯಲಬುರ್ತಿ ಸೀಮಾದಲ್ಲಿ ಸರ್ವೆ ನಂ. 63 ಹಿಸ್ಸಾ ಇ, 4 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿಯು ಈಗ ಅದು ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ನನ್ನ ಅಳಿಯ ನರಸಮ್ಮ ಗಂಡ ಕುಂಟೆಪ್ಪ ಪೊಲೀಸಪಾಟೀಲ ಅವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಗೊತ್ತಿಲ್ಲ. ಸದರಿ ಜಮೀನನ್ನು ದಿನಾಂಕ 30.12.2002 ರಲ್ಲಿ ರೂ.68,000/ ಹಣಗಳಿಗೆ ನನ್ನ ಅಳಿಯ ಮಾರಾಟ ಮಾಡಿರುತ್ತಾನೆ ಎಂದರೆ ಗೊತ್ತಿಲ್ಲ. ಸದರಿ ಜಮೀನು ನನ್ನ ಮಗಳನ್ನು ಆತನಿಗೆ ಮದುವೆ ಮಾಡುವ ಕಾಲಕ್ಕೆ ಇತ್ತು, ಅದನ್ನು ನೋಡಿಯೇ ನಾನು ನನ್ನ ಮಗಳನ್ನು ಆತನಿಗೆ ಮದುವೆ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ.

11. ನನ್ನ ಸಣ್ಣ ಮಗಳು ವಾದಿಯ ಜೊತೆ ನನ್ನ ಸಂಬಂಧ ಈಗ ಚೆನ್ನಾಗಿ ಇದೆ. ಕಿರಿಕಿರಿ ಆಯಿತು, ನಾನು ಮೇಲೆ ಹೇಳಿದ ಸಮಯದಲ್ಲಿ ನನ್ನ ಮಗಳು ವಾದಿಯನ್ನು ವಕೀಲರ ಕಛೇರಿಗೆ ಕರೆದುಕೊಂಡು ಹೋಗಿ ಸಹಿ ಮಾಡಿದೆ ಎಂದರೆ ಸರಿಯಲ್ಲ. ಬಿ.

ಕಿಶನರಾವ್ ಅವರ ಕಛೇರಿಗೆ ಒಬ್ಬರೇ ಹೋಗಿದ್ದಿರಾ ಎಂದರೆ ನಾನು ಹೋಗಿಲ್ಲ ಎಂದು ನುಡಿಯುತ್ತಾರೆ. ಈ ಕೇಸನಲ್ಲಿ ನನ್ನ ಪರ ಪ್ರತಿವಾದ ಪತ್ರ ಸಲ್ಲಿಸಲು ಹಾಗೂ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಲು  ಮಾಹಿತಿ ನೀಡಲು ಯಾವುದೇ ವಕೀಲರ ಕಛೇರಿಗೆ ನಾನು ಹೋಗಿಲ್ಲ.

12. ನಾನು ವಾದಿಯನ್ನು ತಳುವಗೇರಾ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರಿಂದ ಹಾಗೂ 1 ನೇ ಪ್ರತಿವಾದಿ ನಮ್ಮ ಗ್ರಾಮದಲ್ಲಿ ಇರುವುದರಿಂದ ಆಕೆಯೇ ನನ್ನ ಆಗುಹೋಗುಗಳನ್ನು ನೋಡಿಕೊಂಡು ಹೋಗುತ್ತಿದ್ದಾಳೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ ನನ್ನ ಗಂಡನ ಅಣ್ಣನ ವಿರುದ್ಧ ಸಲ್ಲಿಸಿದ ದಾವೆಯ ವಿರುದ್ಧ 1 ಲಕ್ಷ ಹಣ ಬಂದಿದ್ದು, ಸದರಿ ಹಣದಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಜಮೀನನ್ನು ಖರೀದಿ ಹಿಡಿಯುತ್ತೇನೆ ಎಂದು ವಾದಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಜಮೀನನ್ನು ನನ್ನ ಹೆಸರಿನಲ್ಲಿ ಖರೀದಿ ಹಿಡಿಯುವಂತೆ ವಾದಿ ಕೇಳಿಕೊಂಡಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕೃಷಿ ಜಮೀನನ್ನು ಖರೀದಿ ಹಿಡಿಯಲು ಖರೀದಿದಾರರು ಕೃಷಿ ಜಮೀನು ಹೊಂದಿರಬೇಕು ಎಂದು ಸರ್ಕಾರದ ಆದೇಶ ಇತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಯಲಬುರ್ತಿ ಗ್ರಾಮದಲ್ಲಿ ಸರ್ವೆ ನಂ. 63 ಹಿಸ್ಸಾ ಇ ಜಮೀನು ಇದ್ದ ಕಾರಣ ದಾವಾ ಜಮೀನನ್ನು ನಾನು ನಾಮಮಾತ್ರಕ್ಕೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಹಿಡಿದಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವನ್ನು ನಾನು ವಾದಿಗೆ ಹೇಳಿದ್ದೆ ಎಂದರೆ ಸರಿಯಲ್ಲ.

13. 1 ನೇ ಪ್ರತಿವಾದಿ ಮತ್ತು ಆಕೆಯ ಕುಟುಂಬ ಶಾಖಾಪೂರ ಗ್ರಾಮದಲ್ಲಿಯೇ ವಾಸ ಇದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆಕೆಯ ಗಂಡನ ಕುಟುಂಬದವರು ಮಂಗಳೂರು, ಬೆಂಗಳೂರು ಮತ್ತು ಹೊಸಪೇಟೆ ಹಾಗೂ ಇತರೇ ಪಟ್ಟಣಗಳಿಗೆ ದುಡಿಯಲು ಹೋಗಿದ್ದರಾ ಎಂದರೆ ಇಲ್ಲ.

14. ನಾನು 2013 ರಲ್ಲಿ 1 ನೇ ಪ್ರತಿವಾದಿಯ ಜೊತೆ ಇದ್ದ ಸಮಯದಲ್ಲಿ ನಮ್ಮ ನಡುವೆ ಜಗಳ ಆಗಿ ನಾನು ವಾದಿಯ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಮಗಳು ಎಂದು ಹೋಗಿದ್ದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ವಾದಿಗೆ ದಾವಾ ಜಮೀನಿನಲ್ಲಿ ನನಗೂ ಹಾಗೂ ನಿನಗೂ ಸಹ ಹಕ್ಕು ಇದೆ, 1 ನೇ

ಪ್ರತಿವಾದಿ ನನ್ನನ್ನು ಸರಿಯಾಗಿ ನೋಡಿಕೊಂಡು ಹೋಗುತ್ತಿಲ್ಲ, ಆದುದರಿಂದ ಆಕೆಯ ಮೇಲೆ ಕೇಸ ಹಾಕೋಣ ಬಾ ಎಂದು ವಕೀಲರ ಕಛೇರಿಗೆ ಕರೆದುಕೊಂಡು ಬಂದಿದ್ದೆ ಎಂದರೆ ಸರಿಯಲ್ಲ. ಆ ರೀತಿ ವಕೀಲರ ಕಛೇರಿಗೆ ಹೋಗಿ ನನ್ನ ಕಿರಿ ಮಗಳ ಜೊತೆ ಕೂಡಿ ಈ ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ರೀತಿ ಕೇಸ ಹಾಕಿದ ನಂತರ ಈ ನ್ಯಾಯಾಲಯ ವಾದಿಗೂ ಸಹ ಪಾಲು ಕೊಡಬೇಕು ಎಂದು ಆದೇಶ ಮಾಡಿತ್ತು ಎಂದರೆ ನನ್ನ ಹೆಸರಿನಲ್ಲಿ ಹೊಲ ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಆದೇಶ ಆದ ನಂತರ ನಾನು ಪುನಃ ಹಿರಿ ಮಗಳು 1 ನೇ ಪ್ರತಿವಾದಿಯ ಬಳಿ ಹೋಗಿ ಆಕೆಯ ಮಾತು ಕೇಳಿ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಾನು ಈ ದಾವೆಯ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ. ನನ್ನ ಹೆಸರನ್ನು ಇಟ್ಟುಕೊಂಡು 1 ನೇ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದಳು ಎಂದರೆ ಸರಿಯಲ್ಲ. ಆದುದರಿಂದ ಈ ಕೇಸಿನ ವಿಚಾರಣೆ ಪುನಃ ನಡೆಯುತ್ತಿದೆ ಎಂದರೆ ಗೊತ್ತಿಲ್ಲ. ನಾನು ವಾದಿಯ ಜೊತೆಗೆ ಹೋಗಿ ಮಾಹಿತಿ ಕೊಟ್ಟು ಕೇಸ ಹಾಕಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಆಸ್ತಿಯಲ್ಲಿ ಬಂದ 1 ಲಕ್ಷ ಹಣದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರಿಂದ ನನಗೂ ಮತ್ತು 1 ನೇ ಪ್ರತಿವಾದಿಗೂ ಹಾಗೂ ವಾದಿಗೂ ಸಮಾನವಾದ ಪಾಲು ಇದ್ದರೂ ಸಹ ನಾನು 1 ನೇ ಪ್ರತಿವಾದಿಯ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ಸಾಮರ್ಥ್ಯ 1 ನೇ ಪ್ರತಿವಾದಿಗಾಗಲಿ ಮತ್ತು ಆಕೆಯ ಗಂಡನಿಗಾಗಲಿ ಇರಲಿಲ್ಲ ಎಂದರೆ ಸರಿಯಲ್ಲ.

15. 1 ನೇ ಪ್ರತಿವಾದಿಗೆ ಮತ್ತು ಆಕೆಯ ಕುಟುಂಬಕ್ಕೆ ಶಾಖಾಪೂರ ಗ್ರಾಮದಲ್ಲಿ ಎಷ್ಟು ಮನೆ ಇವೆ ಎಂದು ನನಗೆ ಗೊತ್ತಿಲ್ಲ. ಅವರ ಕುಟುಂಬಕ್ಕೆ ಒಂದೇ ಮನೆ ಇದೆ ಎಂದರೆ ಸರಿ. ಸದರಿ ಮನೆಯ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಮೇಟಿ ಕುಟುಂಬದ ಖುಲ್ಲಾ ಜಾಗ, ಉತ್ತರಕ್ಕೆ ಮಾನಪ್ಪ ತಳವಾರ ಅವರ ಮನೆ, ದಕ್ಷಿಣಕ್ಕೆ ಹನಮಪ್ಪ ಬುರ್ಲಿ ಅವರ ಮನೆ ಬರುತ್ತದೆ, ಈ ಜಾಗದಲ್ಲಿ ಅವರು ವಾಸ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆಯ ಚೆಕ್ಕಬಂದಿ ಮತ್ತು ಮನೆ ನಂಬರ ನನಗೆ ಹೇಳಲು ಬರುವುದಿಲ್ಲ.

ಸದರಿ ಮೇಲೆ ಹೇಳಿದ ಚಿಕ್ಕಬಂದಿಯ ಮನೆಯನ್ನು ನನ್ನ ತವರುಮನೆಯವರು ನನ್ನ ಕುಟುಂಬಕ್ಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನಾನು ಇದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮನೆ ಇದ್ದಾವೆ ಯಾವವು ಎಂದು ನನಗೆ ಗೊತ್ತಿಲ್ಲ. ನನ್ನ ತವರುಮನೆಯವರು ಕೊಟ್ಟ ಮನೆ ಈಗ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಈ ಕೇಸ ಹಾಕಿದ ನಂತರ ಸದರಿ ಮನೆ ಸಹ ಹೋಗುತ್ತದೆ ಎಂದು 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ತಮ್ಮ ಹೆಸರಿಗೆ ಮನೆ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ಮನೆಯಲ್ಲಿಯೇ ನಾನು, 1 ನೇ ಪ್ರತಿವಾದಿ, ಆಕೆಯ ಗಂಡ ಮತ್ತು ಕುಟುಂಬದವರು ವಾಸ ಇದ್ದು, ಸದರಿ ಮನೆಯನ್ನು ಹೊರತುಪಡಿಸಿ ಶಾಖಾಪೂರದಲ್ಲಿ ಬೇರೆ ಮನೆ ಇಲ್ಲ ಎಂದರೆ ಸರಿಯಲ್ಲ.

16. ನನ್ನ ಅಣ್ಣ ಹನಮಪ್ಪ ತೀರಿಕೊಂಡು ಸುಮಾರು 10 ರಿಂದ 15 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ ಎಂದರೆ ಉತ್ತರ ಕೊಟ್ಟಿಲ್ಲ. ನನ್ನ ಇನ್ನೊಬ್ಬ ಅಣ್ಣ ಕರಿಯಪ್ಪ ಬುರ್ಲಿ ಹನಮಪ್ಪನ ಹಿಂದೆ ತೀರಿಕೊಂಡಿರುತ್ತಾನೆ. ಆ ಕಾರಣದಿಂದ ನನ್ನ ತಂದೆ ಕುಟುಂಬಕ್ಕೆ ನಾನು ಮತ್ತು ಶಾವಂತ್ರವ್ವ ಮಾತ್ರ ವಾರಸುದಾರರು ಇದ್ದೇವೆ ಎಂದರೆ ಸರಿ. ಈ ಕಾರಣದಿಂದ ನಮ್ಮ ಕುಟುಂಬದ ಸಂಪೂರ್ಣ ಮಾಹಿತಿ ಶಾವಂತ್ರವ್ವನಿಗೆ ಮತ್ತು ಕರಿಯಪ್ಪನ ಹೆಂಡತಿ ಶರಣವ್ವಳಿಗೆ ಗೊತ್ತಿದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದ ಕಾರಣಕ್ಕೆ ಅವರು ವಾದಿಯ ಪರವಾಗಿ ಬಂದು ಸಾಕ್ಷಿ ನುಡಿದಿದ್ದು, ನಾನು ಅದು ಸುಳ್ಳು ಎಂದು ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**